**ಸಾಕ್ಷಿಗೆ ದಿನಾಂಕ 05.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ಶ್ರೀಮತಿ ಎ.ಎ. ವಕೀಲರಿಂದಃ</u>

1. ನಾನು ಈ ಪ್ರಕರಣದಲ್ಲಿ, ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 1 | ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿ |
| ನಿ.ಪಿ 2 | ಪ್ರಥಮ ಹೇಳಿಕೆಯ ದೃಢೀಕೃತ ಪ್ರತಿ |
| ನಿ.ಪಿ 2 ಎ | ಪ್ರಥಮ ಹೇಳಿಕೆಯ ದೃಢೀಕೃತ ಪ್ರತಿಯ ಅನುವಾದಿತ ಪ್ರತಿ |
| ನಿ.ಪಿ 3 | ಶವ ಪರೀಕ್ಷಾ ವರದಿಯ ದೃಢೀಕೃತ ಪ್ರತಿ |
| ನಿ.ಪಿ 4 | ಶವ ತನಿಖಾ ವರದಿಯ ದೃಢೀಕೃತ ಪ್ರತಿ |
| ನಿ.ಪಿ 4 ಎ | ಶವ ತನಿಖಾ ವರದಿಯ ದೃಢೀಕೃತ ಪ್ರತಿಯ ಅನುವಾದಿತ ಪ್ರತಿ |
| ನಿ.ಪಿ 5 | ಎಂ ವಿ ಐ ವರದಿಯ ದೃಢೀಕೃತ ಪ್ರತಿ |
| ನಿ.ಪಿ 6 | ಕಚ್ಚಾ ನಕಾಶೆಯ ದೃಢೀಕೃತ ಪ್ರತಿ |
| ನಿ.ಪಿ 6 ಎ | ಕಚ್ಚಾ ನಕಾಶೆಯ ದೃಢೀಕೃತ ಪ್ರತಿಯ ಅನುವಾದಿತ ಪ್ರತಿ |
| ನಿ.ಪಿ 7 | ದೋಷಾರೋಪಣ ಪತ್ರದ ದೃಢೀಕೃತ ಪ್ರತಿ |
| ನಿ.ಪಿ 8 | ಮರಣ ಪ್ರಮಾಣಪತ್ರದ ನೋಟರಿಕೃತ ದಾಖಲೆ (ಮೂಲದಾಖಲೆಯನ್ನು ಪರಿಶೀಲಿಸಿ ಹಿಂದಿರುಗಿಸಲಾಯಿತು.). |

| | |
|---|---|
| ನಿ.ಪಿ 9 ರಿಂದ 12 | 4 ಆಧಾರ್ ಕಾರ್ಡ್ ಗಳ ನೋಟರಿಕೃತ ದಾಖಲೆಗಳು (ಮೂಲದಾಖಲೆಗಳನ್ನು ಪರಿಶೀಲಿಸಿ ಹಿಂದಿರುಗಿಸಲಾಯಿತು.). |
| ನಿ.ಪಿ 13 | ಕುಟುಂಬ ಪಡಿತರ ಚೀಟಿಯ ನೋಟರಿಕೃತ ದಾಖಲೆ (ಮೂಲದಾಖಲೆಯನ್ನು ಪರಿಶೀಲಿಸಿ ಹಿಂದಿರುಗಿಸಲಾಯಿತು.). |
| ನಿ.ಪಿ 14 | ಡಿ.ಎಲ್.ನ ನೋಟರಿಕೃತ ದಾಖಲೆ (ಮೂಲದಾಖಲೆಯನ್ನು ಪರಿಶೀಲಿಸಿ ಹಿಂದಿರುಗಿಸಲಾಯಿತು.). |
| ನಿ.ಪಿ 15 | ಕುಟುಂಬ ಸದಸ್ಯರ ಪ್ರಮಾಣಪತ್ರದ ನೋಟರಿಕೃತ ದಾಖಲೆ (ಮೂಲದಾಖಲೆಯನ್ನು ಪರಿಶೀಲಿಸಿ ಹಿಂದಿರುಗಿಸಲಾಯಿತು.). |

3. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀಸವಾಲುಃ** **ಎದುರುದಾರರು ಗೈರುಹಾಜರು. ಈ ಕಾರಣದಿಂದ ಪಾಟೀಸವಾಲನ್ನು ಮುಂದೂಡಲಾಯಿತು.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**